# ಶಿಲ್ಪವಾಗಿ ವ್ಯಂಗ್ಯ ಚಿತ್ರ

ಖ್ಯಾತ ವ್ಯಂಗ್ಯ ಚಿತ್ರಕಾರ ದಿ. ಆರ್.ಕೆ.ಲಕ್ಷ್ಮಣ್ ಬರೆದ ಒಂದು ವ್ಯಂಗ್ಯ ಚಿತ್ರ ಶಿಲ್ಪರೂಪ ಪಡೆದಿರುವ ಅಪರೂಪದ ಸ್ಥಳ ಧಾರವಾಡದ ರಾಣಿ ಚೆನ್ನಮ್ಮ ಉದ್ಯಾನವನ. 16ನೆಯ ಮರಾಠಾ ಲೈಟ್ ಇನ್‌ಫೆಂಟ್ರಿ ಘಟಕಕ್ಕಾಗಿ ದಿ. ಆರ್.ಕೆ.ಲಕ್ಷ್ಮಣ್ ಬರೆದ ವ್ಯಂಗ್ಯ ಚಿತ್ರ ಅಲ್ಲಿ ಶಿಲ್ಪಿಗಳಾದ ಎನ್.ಎಂ.ಧಾಟನಾಳ ಮತ್ತು ಸಂಗಡಿಗರಿಂದ ಶಿಲ್ಪವಾಗಿದೆ. ಅಲ್ಲಿ ಬರೆದಿರುವ ಉಕ್ತಿಗಳು ಕೂಡ ಸುಂದರವಾಗಿವೆ. ನಮ್ಮ ಸೈನಿಕರಿಗೆ ಆರ್ .ಕೆ .ಲಕ್ಷ್ಮಣ್ ಕೃತಜ್ಞತೆ ಸಲ್ಲಿಸಿರುವ ಪರಿಗೆ ಮಾತುಗಳೇ ಇಲ್ಲ. ಧಾರಾವಾಡದವರೇ ಆದ ಕರ್ನಲ್ ಸರದೇಶಪಾಂಡೆ (ನಿವೃತ್ತ) ಯವರ ದೇಣಿಗೆಯಿಂದ ಇದರ ನಿರ್ಮಾಣವಾಗಿದೆ.

**-ರಾ.ಲ. ಜಗದೀಶ, ಮಂಡ್ಯ**






# ತೆರೆಮರೆಯತ್ತ ಜಂಗಿನ ಅಯ್ಯನವ್ರು

ಇವರು ಉತ್ತರ ಕರ್ನಾಟಕ ಭಾಗದ ಪ್ರತಿ ಹಳ್ಳಿಯಲ್ಲೂ ಕಾಣ ಸಿಗುತ್ತಿದ್ದ ಮಾಹಿತಿ ವಿನಿಮಯದ ಕೊಂಡಿಯಾಗಿ, ಭಕ್ತಿ–ಭಾವದ ಪ್ರತೀಕದಂತಿದ್ದ ಜಂಗಿನ ಅಯ್ಯನವ್ರು ಅಥವಾ ಹಿಟ್ಟಿನ ಅಯ್ಯನವ್ರು. ಜಂಗಮ ಸಮುದಾಯಕ್ಕೆ ಸೇರಿದ ಪುರುಷರು ಶ್ವೇತ ವರ್ಣದ ಅಂಗಿ, ಧೋತರ, ಹೆಗಲ ಮೇಲೊಂದು ಕೆಂಪು ವಸ್ತ್ರ ಹಾಕಿಕೊಂಡು ಮೊಣಕಾಲ ಕೆಳಗೆ ವಿಶಿಷ್ಟ ಸದ್ದು ಮಾಡುವ ಜಂಗು ಕಟ್ಟಿಕೊಂಡು ಮನೆ ಮನೆ ತಿರುಗುತ್ತ ಮನೆಯವರಿಂದ ಹಿಟ್ಟು ನೀಡಿಸಿಕೊಂಡು ಮತ್ತೊಂದು ಮನೆಗೆ ಹೋಗುವವರು.

ಬಾಗಲಕೋಟೆ ಜಿಲ್ಲೆ ಹುನಗುಂದದಲ್ಲಿ ಇತ್ತೀಚೆಗೆ ಕಂಡ ಸಂಗಯ್ಯ ಬಸಯ್ಯ ಸರಗಣಾಚಾರಿ (60) 'ನಮ್ಮ ಹಿರಿಯಾರಿಂದ ನೆಡಕೊಂಡ ಬಂದದ್ದನ್ನ ನಾವು ಮುಂದವರಿಸೀವಿ. ನಾನು 40–45 ವರ್ಷದಿಂದ ಈ ಕಾಯಕ ಮಾಡತೀನ್ರಿ. ಮೊದಲೆಲ್ಲ 25–30 ಮನಿತನದವ್ರು ಪಾಳಿ ಪ್ರಕಾರ ಹಿಟ್ಟ ನೀಡಿಸ್ಕೊಳ್ಳಾಕ ಹೊಕ್ಕಿದ್ದಿವ್ರಿ. ಈಗೆಲ್ಲಿ 3–4 ಮಂದಿ ಉಳದೀವ್ರಿ. ಮುಂದ ಅವ್ರು ಇರೂದಿಲ್ರಿ' ಎಂದು ಹೇಳುವುದನ್ನು ಪರಿವರ್ತನೆಯ ಹಿನ್ನೆಲೆಯಲ್ಲಿ ಒಪ್ಪಿಕೊಂಡರೂ ಸಾಂಸ್ಕೃತಿಕವಾಗಿ ಅದೊಂದು ದೊಡ್ಡ ಕಂದಕವೆನ್ನಬಹುದು.

**-ಸಿದ್ದಲಿಂಗಪ್ಪ ಬೀಳಗಿ, ಹುನಗುಂದ**

# ಬುಲೆಟ್ ರೈಲು

ಇದು ಜಪಾನ್ ದೇಶದ ಬುಲೆಟ್ ರೈಲು. ನಮ್ಮ ಜಪಾನಿನ ಪ್ರವಾಸದಲ್ಲಿ ಟೋಕಿಯೊದಿಂದ ಕ್ಯೋತೊಗೆ ಸುಮಾರು 450 ಕಿ.ಮೀ. ದೂರವನ್ನು 2 ಗಂಟೆ 20 ನಿಮಿಷದಲ್ಲಿ ತಲುಪಿದೆವು. ಜಪಾನ್ ನಲ್ಲಿ 1964ರಲ್ಲಿ ಶಿಂಕಾನ್ಸೆನ್(ಬುಲೆಟ್ ರೈಲು) ಸಂಚಾರ ಆರಂಭವಾದ ನಂತರ ಮುಂದುವರಿದ ರಾಷ್ಟ್ರಗಳಿಗೆ ಸರಿಸಾಟಿಯಾಗಿ ನಿಲ್ಲಲು ಸಾಧ್ಯವಾಯಿತು. ಬುಲೆಟ್ ರೈಲಿನಿಂದ ಜಪಾನಿಗರ ಜೀವನ ಶೈಲಿ ಮತ್ತು ಆರ್ಥಿಕತೆಯೂ ಬದಲಾಯಿತು. ಬುಲೆಟ್ ರೈಲು ಪ್ರಯಾಣ ಅತ್ಯಂತ ಸುರಕ್ಷಿತವಾಗಿದ್ದು 54 ವರ್ಷಗಳಿಂದ ಯಾವುದೇ ಅಪಘಾತ ಸಂಭವಿಸಿಲ್ಲ. ಜಗತ್ತಿನ ಸುರಕ್ಷಿತ ರೈಲು ಇದು.

**-ಜಯಪುರ ಪ್ರಭಾ ಪಿ. ಶಾಸ್ತ್ರಿ, ಶಿವಮೊಗ್ಗ**

